'ಯಾರೇ ಅದು? ವಾಟ್ ಡಸ್ ಹಿ ಡು?' ನಾನು ಕೇಳಿದೆ. 'ಏನು ಹೆಸರು?' ನೀಲಿ ಕೇಳಿದರು. 'ಫೋಟೊ ಏನಾದರೂ ಇದೆಯಾ?' ನಾನು ಕೇಳಿದೆ. 'ಹೇಗೆ ಸಿಕ್ಕಿದ್ದು? ವೇರ್ ಡಿಡ್ಯು ಟು ಗೆಟ್ಟು ಮೀಟ್?' ನೀಲಿ ಕೇಳಿದರು. 'ಯಾವೂರಿನವನೇ?' ನನ್ನ ಪ್ರಶ್ನೆ. 'ಅಪ್ಪ ಅಮ್ಮ ಇದ್ದಾರಾ?' ನೀಲಿಯ ತನಿಖೆ... ಚಿನ್ನು, ಈ ಪರಿ ಪ್ರಶ್ನೆಗಳ ನಡುವೆ, ವಿಚಾರಣೆಗೆ ನಿಂತ ಅಪರಾಧಿಯಂತಾಗಿಬಿಟ್ಟಳು. ನನ್ನ ಮತ್ತು ನೀಲಿಯ ನಡುವೆ ಗೋಣು ತೂಗಿದಳು. ಕಣ್ಣುಗಳೂ ಅತ್ತಲಿಂದಿತ್ತ ಇತ್ತಲಿಂದತ್ತ ಜೀಕಿದವು.

'ಅಬ್ಬಬ್ಬಬ್ಬಬ... ಮುಗೀತೋ ಇನ್ನೂ ಇದೆಯೋ?' ತಮಾಷೆಗೆ ಮುನಿದಳು. 'ಶೇಷಪ್ ಅಂತ ಹೆಸರು... ಇದೇ ಊರು. ಬನಶಂಕರಿಯಲ್ಲಿ ಮನೆ. ನನ್ನ ಕಂಪನಿಯಲ್ಲೇ ಇದ್ದಾನೆ. ಇದ್ದಾನೆ ಅಂತ ಗೊತ್ತೇ ಇರಲಿಲ್ಲ, ನೋಡು... ನನ್ನ ಕ್ಲೋಸ್ ಫ್ರೆಂಡ್ ಇದ್ದಾನಲ್ಲ ಪರಿಣಯ್ ಅಂತ, ಅವನ ಕ್ಲಾಸ್ಮೇಟ್ ಅಂತೆ. ಅವನೇ ಪರಿಚಯ ಮಾಡಿಸಿದ್ದು... ಸದ್ಯಕ್ಕೆ ಇಲ್ಲಿಲ್ಲ. ಡೆಪ್ಯುಟೇಶನಿನ ಮೇಲೆ ಯುಎಸ್ಸಿಗೆ ಹೋಗಿದ್ದಾನೆ. ಒಂದೆರಡು ಸಲ ಸಿಕ್ಕಿದ್ದ. ಆಮೇಲೆ ಫೋನೂ ಫೇಸ್ಟೈಮು ವಾಟ್ಸ್ಯಾಪು... ಎರಡು ತಿಂಗಳಿಂದ ಇದೇ ಆಗಿಬಿಟ್ಟಿದೆ. ಅವನೇ ಪ್ರೊಪೋಸ್ ಮಾಡಿದ್ದು... ಮೊದಲು ಊಹ್ಞೂಂ ಅಂದೆ. ಆಮೇಲೆ ಇವನೇ ಸರಿ ಅನ್ನಿಸಿತು... ಬೆಳಿಗ್ಗೆ ಅಷ್ಟೇ ಹ್ಞೂಂ ಅಂದೆ... ನಾನು ಮಾಡಿದ್ದು ಸರಿ ಅಲ್ಲವೇನಮ್ಮ? ಐ ಥಿಂಕ್ ಐ ಲೈಕ್ ಹಿಮ್...' ಒಂದೇ ಉಸುರಿನಲ್ಲಿ ಹೇಳಿದಳು.

ಖುಷಿಯೆಂಬ ಖುಷಿಗೆ ಇನ್ನು ದಾರಿಯುಂಟೆ? ಮೂವರೂ ಸ್ವರ್ಗದಲ್ಲಿ ತೂಗಿಹೋದೆವು.

'ಕನಕವಾರಿ, ಹುಡುಗನ ಹೆಸರು ಏನಂತಂದಳು?' ನೀಲಿ, ಊಟವಾದ ಮೇಲೆ ಮಂಚಕ್ಕೆಳಿಯುತ್ತ ಕೇಳಿದರು. 'ಅದೇನೋ ಹೇಳಿದಳಲ್ಲ...' ನೆನಪಿಸಿಕೊಂಡೆ. 'ಏನೋ ಶಟಪ್ ಅಂದ ಹಾಗಾಯಿತಲ್ಲವಾ?' ನೀಲಿ ತಮಾಷೆ ಮಾಡಿದರು. 'ಚಿನ್ನು... ಅವನ ಹೆಸರೇನು ಅಂತಂದೆಯೇ?' ನಾನು ರೂಮಿನಿಂದಲೇ ಮಗಳ ಕೋಣೆಯವರೆಗೂ ಮಾತು ಹರಿಸಿ ಕೇಳಿದೆ. 'ಶೇಷಪ್... ಶೇಷಪ್...' ಚಿನ್ನು ಒರಲಿದಳು. 'ಏನು? ಏನು?' ಕಿವಿ ನಿಮಿರಿಸಿ ಮತ್ತೆ ಕೇಳಿದೆ. 'ಶೇಷಪ್ ಅಂತಮ್ಮ...' ಚಿನ್ನು ನಮ್ಮ ಮಲಗುಕೋಣೆಯವರೆಗೂ ಬಂದು ಹೇಳಿದಳು. 'ಏನು ಹೆಸರೇ ಅದು? ವಿಚಿತ್ರವಾಗಿದೆಯಲ್ಲ?' ಕುತೂಹಲಿಸಿ ಕೇಳಿದೆ. 'ಗೊತ್ತಿಲ್ಲಮ್ಮ...' ಚಿನ್ನು ನಕ್ಕಳು. 'ಒಳ್ಳೇ ಶಟಪ್ ಅಂದ ಹಾಗೆ ಕೇಳಿಸುತ್ತಲ್ಲವಾ?' ಎಂದು ಹೇಳಿ, 'ಹ್ಞಾಂ... ಅದೇನೋ ಹೇಳಿದನಮ್ಮ... ಅದು ಅವರ ತಾತನ ಹೆಸರಿನ ಶಾರ್ಟ್‌ಫಾರ್ಮ್ ಅಂತೆ...' ನೆನಪಿಸಿಕೊಳ್ಳಲು ತಿಣಕಿದಳು. ನಿಮ್ಮಮ್ಮ

ಮಗಳಿಗೆ ನೆನಪಾಯಿತೋ, ಇಲ್ಲವೋ– ನನಗಂತೂ ಯಾರೆಂದು ಹೊಳೆದುಬಿಟ್ಟಿತು! ಇದು ನಮ್ಮ ಶೇಷೂ ತಾತನ ಮೊಮ್ಮಗನಿರಬಹುದೆ? ಶೇಷಪ್ಪಯ್ಯ ಎಂಬ ಹಳೆಯ ಹೆಸರನ್ನು ತುಂಡರಿಸಿ ತೆಗೆದ 'ಶೇಷಪ್' ಆಗಿರಬಹುದೆ? ಇದೇ ಊರು... ಬನಶಂಕರಿಯಲ್ಲಿ ಮನೆ... ಓಹ್! ಮಾಹಿತಿಯೂ ಸಂಗತಿಯೂ ಹೊಂದಿಬಂದ ಕೂಡಲೇ, ನನಗೆ ಶೇಷಪ್ ಶೇಷಪ್ಪಯ್ಯನ ಪ್ರಪೌತ್ರನೇ ಹೌದೆಂದು ಅನ್ನಿಸಿತು. ಅನಿಸಿದ್ದೇ ಸಣ್ಣಗೆ ಮೈ ಕಂಪಿಸಿತು... ಮನಸು ಅಳುಕಿತು... ಬೆವರಿದೆನೋ ಹೇಗೆ?

'ಅವನದೊಂದು ಫೋಟೊ ಇದ್ದರೆ ತೋರಿಸು, ಚಿನ್ನು...' ನೀಲಿ ನಿರಾಳವಾಗಿ ಹೇಳಿದರು.

'ಸರೀಪ್ಪ... ಈಗಲೇ ವಾಟ್ಸ್ಯಾಪ್ ಮಾಡುತೀನಿ...' ಚಿನ್ನು ಆಕಳಿಸುತ್ತ ಹೇಳಿದಳು. 'ಸರಿ... ಈಗ ಮಲಕ್ಕೊಳ್ಳಲಾ? ಬೆಳಿಗ್ಗೆ ಬೇರೆ ಮುಂಚೆ ಏಳಬೇಕು... ಒಂದು ಕಾನ್ಫರೆನ್ಸ್ ಕಾಲ್ ಇದೆ...'